ಪಿಡಬ್ಲ್ಯೂ ಃ- 01

(ಇಂದು ದಿಃ 29-05-2018 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಬೋದಿಸಲಾಯಿತು)

ಮುಂದುವರೆದ ಪಾಟಿ ಸವಾಲು ಃ- ಶ್ರೀ. ಡಿ.ಎಂ.ಸಿ ರವರಿಂದ ಃ-

ನನ್ನ ತಂದೆ 1 ನೇ ಪ್ರತಿವಾದಿ ತಂದೆ ವಿರುದ್ದ ಅಸಲು ದಾವೆ 47/1975 ರಂತೆ ದಾವೆ ಹೂಡಿದ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ದಾವೆಯಲ್ಲಿ ನನ್ನ ತಂದೆ ಸಲ್ಲಿಸಿದ ಅರ್ಜಿಯಂತೆ ಸರ್ವೆ ನಂ. 1/1 ಸರ್ವೆಯಾಗಿ ಪೋಡಿಯಾಗಿರುತ್ತದೆ ಎಂದರೆ ಗೊತ್ತಿಲ್ಲ. ಸರ್ವೆ ನಂ. 1/1 ರಲ್ಲಿ ಒಟ್ಟು ವಿಸ್ತೀಣರ್ 3 ಎಕರೆ 26 ಗುಂಟೆ ಇದೆ ಎಂದರೆ ಸರಿಯಲ್ಲ. ಸರ್ವೆ ನಂ. 1/1 ರಲ್ಲಿ ಒಟ್ಟು 9 ಎಕರೆ ವಿಸ್ತೀರ್ಣ ಇದ್ದು ಸದರಿ ವಿಸ್ತೀರ್ಣದ ಪೈಕಿ ನನ್ನ ತಂದೆಗೆ 3 ಎಕರೆ 26 ಗುಂಟೆ ಮಂಜೂರಾಗಿರುತ್ತದೆ ಎಂದರೆ ಸರಿಯಲ್ಲ. ನಮ್ಮ ಜಮೀನಿನಲ್ಲಿ ನೀಲಗಿರಿ, ಸಪೋಟ ಮತ್ತು ಚೇಪೆ ಗಿಡ ಮತ್ತು ಬೀಟೆ ಗಿಡಗಳು ಇದ್ದ ಬಗ್ಗೆ ಪಹಣಿಗಳಲ್ಲಿ ನಮೂದಾಗಿರುವುದಿಲ್ಲ. ನನ್ನ ಜಮೀನಿನ ಅಕ್ಕ ಪಕ್ಕ 1 ನೇ ಪ್ರತಿವಾದಿ ಜಮೀನು ಇರುವುದಿಲ್ಲ. ಸರ್ವೆ ನಂ. 1/1 ಮತ್ತು 1/2 ರಲ್ಲಿ 1 ನೇ ಪ್ರತಿವಾದಿಗೆ ಸೇರಿದ ಪೂರ್ವ ಪಿಶ್ಚಿಮ 50 ಅಡಿ ಉತ್ತರ ದಕ್ಷಿಣ 40 ಅಡಿ ಆಸ್ತಿ ಇರುತ್ತದೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಹೂಡಿದ್ದ ಅಸಲು ದಾವೆ 132/1998 ಡಿಕ್ರಿಯಾಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಡಿಕ್ರಿ ವಿರುದ್ದ ಸಲ್ಲಿಸಿದ ಮೇಲ್ಮನವಿ ಸಂಖ್ಯೆ 7/2000 ವಜಾ ಆಗಿರುತ್ತದೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಗೆ ಮೊಸ ಮಾಡುವ ಉದ್ದೇಶದಿಂದ ಆಕೆಯ ಸ್ವತ್ತು ಸ್ಥಳದಲ್ಲಿ ಇಲ್ಲ ಎಂದು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಪೂರ್ವ ದಿಕ್ಕಿದಲ್ಲಿ 1 ನೇ ಪ್ರತಿವಾದಿ ಸ್ವತ್ತು ಇರುತ್ತದೆ ಎಂದರೆ ಸರಿಯಲ್ಲ. ನಾನು 1 ನೇ ಪ್ರತಿವಾದಿ ಸ್ವಾದೀನಕ್ಕೆ ತೊಂದರೆ ಕೊಟ್ಟ ಕಾರಣ ಅವರು ಅಸಲು ದಾವೆ 132/1998 ರಂತೆ ದಾವೆ ಹೂಡಿದ್ದರು ಎಂದರೆ ಸರಿಯಲ್ಲ. ಅಸಲು ದಾವೆ 21/2000 ಅವನ್ನು ಡಿಕ್ರಿಯನ್ನು ಸಹ ಮರೆಮಾಚಿ ನಾನು ಈ ಸುಳ್ಳು ದಾವೆ ಹೂಡಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಃ- ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ವಿಚಾರಣೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಎ ನು.,